OS No.19/2015

DW-3

**(ಇಂದು ದಿಃ 17-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ.SKD ವಕೀಲರಿಂದಃ-**

ನಿಪಿ-43 ರ ಪ್ರಕಾರ ಸರ್ವೇ ನಂಬರ 185 ರಲ್ಲಿನ ಜಮೀನು 10 ಜನರಿಗೆ ಮಂಜೂರಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಾಯಮ್ಮನ ಹೆಸರಿಗೆ ನಾಮಿನಲ್ ಗ್ರಾಂಟ್ ಆಗಿತ್ತು ಅವರು ಯಾವತ್ತು ಉಳಿಮೆ ಮಾಡಿಲ್ಲ ಎಂದು ಹೇಳುತ್ತಾರೆ. ಸಾಯಮ್ಮ ಯಾವತ್ತು ಜಮೀನಿನಲ್ಲಿ ಕಬ್ಜಾದಲ್ಲಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.185 ರಲ್ಲಿ ಅಂದಾಜು 74 ಎಕರೆ ಜಮೀನು ಇದೆ. ಹತ್ತು ಜನರಿಗೆ ಜಮೀನು ಮಂಜೂರಾಗಿದೆ. ಹತ್ತು ಮಂಜೂರುದಾರರ ಜಮೀನುಗಳ ಚೆಕ್ ಬಂದಿ ಹೇಳಲು ಆಗುವುದಿಲ್ಲ. ಸಾಯಮ್ಮನಿಗೆ ಗ್ರಾಂಟ್ ಆದ ಜಮೀನಿನ ಚೆಕ್ ಬಂದಿ ನನಗೆ ಗೊತ್ತಿಲ್ಲ. ಸಾಯಮ್ಮ ಗ್ರಾಂಟ್ ಆದ ಜಮೀನನ್ನು ಅವರ ಕುಟುಂಬದ ಸದಸ್ಯರಿಗೆ ಮಾರಾಟ ಮಾಡಿದ್ದಾರೆ. ಆ ಬಗ್ಗೆ ಖರೀದ ಪತ್ರ ಅಗಿಲ್ಲ . ಸಾಕ್ಷಿ ಮುಂದುವರೆದು ರಾಜಿ ಡಿಕ್ರಿ ಆಗಿದೆ ಎಂದು ಹೇಳುತ್ತಾರೆ. ಅವಳ ಪೂರ್ತಿ ಜಮೀನನ್ನು ಅಂದಾಜು 27,000/- ಮಾರಾಟ ಮಾಡಿದ್ದಾಳೆ . ನಾನು ನನ್ನ ಆಸ್ತಿ ಮಾರಾಟ ಮಾಡಿದ್ದೇನೆ. ಖರೀದಿ ಪತ್ರದ ನೋಂದಣಿ ಸಬ್ ರೆಜಿಸ್ಟರ್ ಕಚೇರಿಯಲ್ಲಿ ಆಗುತ್ತದೆ. ಶಾಮ್ಮಮ್ಮ ಮಾರಾಟ ಮಾಡಿದ ದಿನಾಂಕ ತಿಂಗಳು ನೆನಪಿಲ್ಲ. ಸಾಕ್ಷಿ ಮುಂದುವೆರದು 1985 ರಲ್ಲಿ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. 1977 ರಿಂದ ದೊಡ್ಡ ಮೊಗಲಪ್ಪ , ಸಣ್ಣ ಮೊಗಲಪ್ಪ, ಆಜಾಪ್ಪ , ಯಲ್ಲಪ್ಪ ಉಳಿಮೆ ಮಾಡುತ್ತಿದ್ದಾರೆ . ಇವರು ಎಲ್ಲಾ ಈಗ ತೀರಿ ಹೋಗಿದ್ದಾರೆ .

1 ರಿಂದ 8 ಪ್ರತಿವಾದಿಯರು ಮೊದಲು ಒಟ್ಟಿಗೆ ಇದ್ದರು ಈಗ ಬೇರೆ ಇದ್ದಾರೆ. ಅವರು ಬೇರೆ ಯಾಗಿ ಎಷ್ಟು ವರ್ಷ ಆಯಿತು ನನಗೆ ಗೊತ್ತಿಲ್ಲ . 1 ರಿಂದ 8 ಪ್ರತಿವಾದಿಯರ ನಡುವೆ ಸುಮಾರು 40-50 ತುಕಡಿಯಾಗಿರಬಹುದು. ಸಾಯಮ್ಮನ ಜಮೀನುಗಳು 185 , 163, ಅವರಿಗೆ ಒಟ್ಟು 3-4 ಸರ್ವ ನಂಬರಗಳು ಇದ್ದವು. ವಾದಿಯರು ಮತ್ತು ಪ್ರತಿವಾದಿಯರು ಅಸಲು ದಾವಾ ನಂಬರ 3/1985 ರಲ್ಲಿ ರಾಜಿ ಮಾಡಿಕೊಂಡ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. ರಾಜಿ ಸಂದಾನದ ಕಾಲಕ್ಕೆ ನ್ಯಾಯಾಲಯದಲ್ಲಿ ಹಣ ನೀಡಿದ್ದಾರೆ . ರಾಜಿ ಡಿಕ್ರಿ ಪ್ರಕಾರ ಬಂದ ಹಣದಿಂದ ಮೊಗಲಪ್ಪ ಮತ್ತು ಯಲ್ಲಪ್ಪ ಕೊಂಡುಕೊಂಡ ಜಮೀನಿನ ಸರ್ವೇ ನಂಬರ

OS No.19/2015

DW-3

ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಪಂಚಾಯತಿ ಶೀಲಾರಕೋಟ್ ಗ್ರಾಮದಲ್ಲಿ ಆಗಿತ್ತು. ಅಲ್ಲಿ ಗುಂಡಪ್ಪ, ನಾನು , ಗ್ರಾಮದ ಇನ್ನು 4-5 ಜನ ಇದ್ದರು. ರಾಜಿ ಪಂಚಾಯಾತಿ ಆದ ದಿನಾಂಕ ಮತ್ತು ತಿಂಗಳು ಹೇಳಲು ಆಗುವುದಿಲ್ಲ.

ವಾದಿಯರು ಯವತ್ತು ದಾವಾ ಸ್ವತ್ತಿನ ಮಾಲೀಕರಲ್ಲ ಮತ್ತು ಸ್ವಾ ದೀನದಾರರು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಯಮ್ಮ ಯಾಗಲಿ ಅವಳ ಮಗಳು ಶಾಮ್ಮಮ್ಮ ಆಗಲಿ ದಾವಾ ಜಮೀನನ್ನು ಯಾವತ್ತು ಯಾರಿಗೂ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ರಾಜಿ ಡಿಕ್ರಿ ಪ್ರಕಾರ ಹಣ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜಿಲ್ಲಾ ಪಂಚಾಯತ ಸದಸ್ಯ . ನನ್ನ ಹೆಂಡತಿ ತಾಲೂಕಾ ಪಂಚಾಯತಿ ಅಧ್ಯಕ್ಷರು ಆಗಿದ್ದರು ಎಂದರೆ ಸರಿ. ನಮ್ಮ ಗ್ರಾಮಸ್ಥರು ನಮಗೆ ಮತ ಹಾಕುತ್ತಾರೆ ಮತ್ತು ನಮ್ಮನ್ನು ಬೆಂಬಲಿಸುತ್ತಾರೆ ಎಂದು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ರಾಜಿ ಯಾದಾಗ ನಾನು ಜನಪ್ರತಿನಿದಿ ಆಗಿರಲಿಲ್ಲ ಎಂದು ಹೇಳುತ್ತಾರೆ. ನಾನು ಮುಂಚೆಯಿಂದ ರಾಜಕಾರಣದಲ್ಲಿ ಇದ್ದೇನೆ ಎಂದೆರ ಸರಿ. ಪ್ರತಿವಾದಿಯರು ನನ್ನ ಹಿಂಬಾಲಕರು ಆಗಿರುವ ಕಾರಣ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**